| 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು |
|---|

ಎಸ್ ಸಿ 34/2023

| ಸಾಕ್ಷಿದಾರರ ಹೆಸರು | ः | ಸುಕನ್ಯ | ಪ್ರಾಸಾ | 4 |
|---|---|---|---|---|
| ಗಂಡನ ಹೆಸರು | ः | ವೆಂಕಟೇಶ | ಚಾಸಾ | 8 |
| ವಯಸ್ಸು | ः | 24 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ ಃ 14.03.2024 | |
| ವೃತ್ತಿ | ः | ಗೃಹಿಣಿ | | |
| ವಾಸ ಸ್ಥಳ | ः | ಮೈಸೂರು | | |

ಮುಖ್ಯ ವಿಚಾರಣೆ ಃ ಸರಕಾರಿ ಅಭಿಯೋಜಕರವರಿಂದ ಃ

1. ಆರೋಪಿತರು ಗೊತ್ತು. ಮೃತ ವೆಂಕಟೇಶ ಅಲಿಯಾಸ್ ಕರಿಯ ನನ್ನ ಗಂಡ. ನಮ್ಮ ಮನೆಯಲ್ಲಿ ನಾನು , ನನ್ನ ಗಂಡ , ಅತ್ತೆ , ಮಾವ ಇದ್ದೆವು. ನನ್ನ ಗಂಡ ಗಾರೆ ಕೆಲಸ ಮಾಡುತ್ತಿದ್ದರು. ನನ್ನ ಅತ್ತೆ ಹೊಟೆಲ್ ನಲ್ಲಿ ಪಾತ್ರೆ ತೊಳೆಯುವ ಕೆಲಸ ಮಾಡುತ್ತಾರೆ. ನನ್ನ ಗಂಡನಿಗೂ 1 ನೇ ಆರೋಪಿಯ ನಡುವೆ ಗಲಾಟೆಯಾಗಿ 1 ನೇ ಆರೋಪಿಯ ಕೈಗೆ ಹೊಡೆದು ಗಾಯಗೊಳಿಸಿದ ಕಾರಣ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿ ನನ್ನ ಗಂಡ ಎರಡು ತಿಂಗಳು ಜೈಲಿನಲ್ಲಿ ಇದ್ದರು. ನಾವೇ ಅವರಿಗೆ ಜಾಮೀನು ಕೊಟ್ಟು ಬಿಡಿಸಿಕೊಂಡು ಬಂದಿರುತ್ತೇವೆ.

2. ಆನಂತರ ನನ್ನ ಗಂಡ ಯಾರ ತಂಟೆಗೂ ಹೋಗದೇ ಗಾರೆ ಕೆಲಸ ಮಾಡಿಕೊಂಡು ಮನೆಯಲ್ಲಿ ಇದ್ದರು. ದಿಃ 31.08.2022 ರಂದು ಗಣಪತಿ ಹಬ್ಬದ ದಿನ ನನ್ನ ಗಂಡ ರಾತ್ರಿ 8 ಗಂಟೆ ಸಮಯದಲ್ಲಿ ಮನೆಯಿಂದ ಹೊರಗೆ ಹೋಗಿರುತ್ತಾರೆ. ನನ್ನ ಅತ್ತೆ ಅವರ ಹಿರಿಯ ಮಗಳ ಮನೆಗೆ ಹೋಗಿರುತ್ತಾರೆ.

3. ನಂತರ ನಾನು ನನ್ನ ಮಗುವಿನೊಂದಿಗೆ ನಮ್ಮ ಮನೆಯ ಹಿಂಭಾಗ ಗಣಪತಿ ಕೂರಿಸಿದ್ದ ಪೆಂಡಾಲ್ ಬಳಿ ಡಾನ್ಸ ನೋಡಲು ಹೋಗಿರುತ್ತೇವೆ. ನನ್ನ ಗಂಡನ ಸ್ನೇಹಿತರಿಗೆ ಫೋನ್ ಬಂದಿರುತ್ತದೆ. ಟೆಂಟ್ ಸರ್ಕಲ್ ಹತ್ತಿರ ನನ್ನ ಗಂಡನ ಕೊಲೆ ಆಗಿದೆ ಎಂಬುದಾಗಿ ತಿಳಿಸಿರುತ್ತಾರೆ. ಕೂಡಲೇ ನಾನು ಟೆಂಟ್ ಸರ್ಕಲ್ ಹತ್ತಿರ ಹೋದಾಗ ಅಲ್ಲಿ ನನ್ನ

ಗಂಡ ಇರಲಿಲ್ಲ. ಆತನನ್ನು ನವೀನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವ ವಿಚಾರ ನನಗೆ ತಿಳಿಯಿತು. ನಾನು ಕೆ ಆರ್ ಆಸ್ಪತ್ರೆಗೆ ಹೋಗಿ ನೋಡಲಾಗಿ ನನ್ನ ಗಂಡ ಸತ್ತು ಹೋಗಿರುವ ವಿಚಾರ ತಿಳಿಯಿತು.

4. ನಂತರ ನನ್ನ ಅತ್ತೆ , ನಾದಿನಿ, ಅತ್ತಿಗೆ ಲಕ್ಷ್ಮಿ ಅಲ್ಲಿಗೆ ಬಂದರು. ಅಲ್ಲಿದ್ದ ನವೀನನನ್ನು ವಿಚಾರ ಮಾಡಲಾಗಿ ನವೀನನಿಗೂ ಕೂಡ ಪೆಟ್ಟಾಗಿರುತ್ತದೆ ಮತ್ತು ಆರೋಪಿತರು ನನ್ನ ಗಂಡನ ಎದೆ , ಕೈ ಮತ್ತು ಹೊಟ್ಟೆಗೆ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುತ್ತಾರೆ ಎಂಬುದಾಗಿ ನವೀನ ಹೇಳಿದರು. ನನ್ನ ಗಂಡ ಕುಸಿದು ಬಿದ್ದಿದ್ದರಿಂದ ಆತನನ್ನು ಆಟೋದಲ್ಲಿ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ ಎಂಬುದಾಗಿ ನವೀನ ತಿಳಿಸಿದ್ದನು.

5. ನಂತರ ನನ್ನ ಗಂಡನ ಶವವನ್ನು ಆಸ್ಪತ್ರೆಯ ಶವಾಗಾರದಲ್ಲಿ ನೋಡಿರುತ್ತೇನೆ. ಈ ಬಗ್ಗೆ ನವೀನ ಪೊಲೀಸರಿಗೆ ದೂರು ಕೊಟ್ಟಿರುತ್ತಾನೆ. ಹಳೆ ದ್ವೇಷದಿಂದ ಆರೋಪಿತರು ನನ್ನ ಗಂಡನಿಗೆ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಅಂತೆಯೇ ಅತ್ತೆ ರೇಖಾ ಮತ್ತು ನನ್ನ ನಾದಿನಿಯ ಗಂಡ ಅರವಿಂದ ಅಲಿಯಾಸ್ ನವೀನ ಅವರ ಹೇಳಿಕೆಗಳನ್ನು ಪೊಲೀಸರು ಮಾಡಿಕೊಂಡಿರುತ್ತಾರೆ.

**ಪಾಟೀ ಸವಾಲು ಃ *1* ನೇ ಆರೋಪಿ ಪರ ವಕೀಲರಿಂದ ಃ**

6. ನನ್ನದು ಲವ್ ಮ್ಯಾರೇಜ್. ಈ ವಿಚಾರದಲ್ಲಿ ನಮ್ಮ ತಂದೆ ತಾಯಿ ಒಪ್ಪಿರಲಿಲ್ಲ. ಮದುವೆಗಿಂತ ಮುಂಚೆ ನನ್ನ ಗಂಡ ಸಣ್ಣಪುಟ್ಟ ಗಲಾಟೆಯನ್ನು ಮಾಡಿಕೊಳ್ಳುತ್ತಿದ್ದರು. ಆದರೆ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನನ್ನ ತಂದೆ ತಾಯಿ ಅವನನ್ನು ಮದುವೆ ಅಗುವುದು ಬೇಡ ಎಂಬುದಾಗಿ ನನಗೆ ಬುದ್ದಿವಾದ ಹೇಳಿದ್ದರು. ನನ್ನ ಗಂಡನ ಮೇಲೆ ಒಟ್ಟು ಮೂರು ಕೇಸುಗಳು ಇದ್ದವು. ಆ ಕೇಸುಗಳಲ್ಲಿ ನನ್ನ

ಗಂಡ ಕೋರ್ಟಿಗೆ ಹೋಗಿ ಬಂದು ಮಾಡುತ್ತಿದ್ದನು. ಆ ಕಾರಣದಿಂದ ಊರಿನಲ್ಲಿ ಕೆಲವರಿಗೆ ನನ್ನ ಗಂಡನ ಮೇಲೆ ದ್ವೇಷ ಇತ್ತು ಎಂದರೆ ಸರಿ. 1 ನೇ ಆರೋಪಿಗೆ ನನ್ನ ಗಂಡ ಹೊಡೆದು ಗಲಾಟೆ ಮಾಡಿದ ನಂತರ ನನ್ನ ಗಂಡ ಸಾಯುವವರೆಗೂ 1 ನೇ ಆರೋಪಿ ಮತ್ತು ನನ್ನ ಗಂಡನ ನಡುವೆ ಯಾವುದೇ ಗಲಾಟೆ ಆಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಸಾಯುವ ಹಿಂದೆ ನನ್ನ ಗಂಡನಿಗೂ 1 ನೇ ಆರೋಪಿಗೂ ಗಲಾಟೆ ಆಗಿತ್ತು. ದಿಃ 31.08.2022 ರಂದು ಗಲಾಟೆ ಆಗಿತ್ತು. ನನ್ನ ಗಂಡ ಸಾಯುವ ಎರಡೂವರೆ ವರ್ಷದ ಮುಂಚೆ 1 ನೇ ಆರೋಪಿಯ ಕೈಗೆ ಹೊಡೆದು ಗಲಾಟೆ ಆಗಿತ್ತು.

7. ನನ್ನ ಗಂಡನಿಗೆ ದ್ವೇಷವಿದ್ದ ವ್ಯಕ್ತಿಗಳು ನನ್ನ ಗಂಡನಿಗೆ ಚುಚ್ಚಿ ಕೊಲೆ ಮಾಡಿರುತ್ತಾರೆ , ಆರೋಪಿತರಿಗೂ ಆ ಕೃತ್ಯಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಟೆಂಟ್ ಸರ್ಕಲ್ ನಲ್ಲಿ ಸುಮಾರು ಅಂಗಡಿಗಳು ಮೆಡಿಕಲ್ ಸ್ಟೋರ್ ಗಳು ಇದೆ ಎಂದರೆ ಸರಿ. ಟೆಂಟ್ ಸರ್ಕಲ್ ನಲ್ಲಿ ಮೂರು ಬಾರ್ ಗಳು ಇವೆ ಎಂದರೆ ಸರಿ. ನನ್ನ ಗಂಡನಿಗೆ ಕುಡಿಯುವ ಅಭ್ಯಾಸ ಇತ್ತು ಎಂದರೆ ಸರಿ. ಘಟನೆ ಆಯಿತು ಎಂದು ಹೇಳಿದ ದಿನ ನನ್ನ ಗಂಡ ಕುಡಿದಿದ್ದನು ಎಂದರೆ ಸರಿ.

8. ಆರೋಪಿತರು ನನ್ನ ಗಂಡನಿಗೆ ಹೊಡೆದು ಸಾಯಿಸಿರುತ್ತಾರೆ ಎನ್ನುವ ವಿಚಾರವನ್ನು ನವೀನ ನನಗೆ ಹೇಳಿದ್ದಾನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಬೇಕು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(4 ಮತ್ತು 5 ನೇ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ವಿನಂತಿಸಿಕೊಂಡಿರುತ್ತಾರೆ)

(2 ಮತ್ತು 3 ನೇ ಆರೋಪಿತರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರುವಿಚಾರಣೆ ಃ ಇಲ್ಲ**

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

**ಓ ಹೇ ಕೇ ಸ ಇ ಎ**

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು